# ಹೊಸತು



## ಲಿವಾ ಫ್ಯಾಷನ್ ಫ್ಯಾಬ್ರಿಕ್

ಸಾಂಪ್ರದಾಯಿಕ ಮತ್ತು ಆಧುನಿಕ ಶೈಲಿಯ ಉಡುಪುಗಳಿಗೆ ಪ್ರಸಿದ್ಧವಾದ ಪ್ಯಾಂಟಲೂನ್ಸ್ ಸಂಸ್ಥೆ ಇದೀಗ ಲಿವಾ ಹೆಸರಿನ ಫ್ಯಾಬ್ರಿಕ್ ಉಡುಪುಗಳ ಸಂಗ್ರಹ ಹೊರತಂದಿದೆ.

ಹಗುರ ಮತ್ತು ನೈಸರ್ಗಿಕ ರಾಸಾಯನಿಕ ಬಳಸಿ ತಯಾರಿಸಿರುವ ಈ ಉಡುಪುಗಳು ಮೃದುವಾಗಿದ್ದು, ದೇಹಕ್ಕೆ ಆರಾಮ ನೀಡುತ್ತವೆ ಎಂದು ಸಂಸ್ಥೆ ಹೇಳಿದೆ.

ಮಿಕ್ಸ್ ಆ್ಯಂಡ್ ಮ್ಯಾಚ್ ಇಷ್ಟಪಡುವ ಯುವತಿಯರಿಗೆ ಇದರಲ್ಲಿ ಆಕರ್ಷಕ ಸಂಗ್ರಹದ ಆಯ್ಕೆಯಿದೆ. ಹಲವು ವಿನ್ಯಾಸ ಮತ್ತು ಬಣ್ಣಗಳ ಸಂಯೋಜನೆಯಲ್ಲಿ ಇದು ಲಭ್ಯ.

ಮಾಹಿತಿಗೆ: 9738007723

## ಶ್ಯಾಫರ್ ಫೆರಾರಿ 300 ಪೆನ್

ಆಕರ್ಷಕ ಪೆನ್ ತಯಾರಿಕೆಗೆ ಹೆಸರುವಾಸಿಯಾದ ಶ್ಯಾಫರ್ ಇದೀಗ ಫೆರಾರಿ ಬ್ರಾಂಡ್‌ನ ಸಹಯೋಗದೊಂದಿಗೆ ನೂತನ ಮಾದರಿಯ ಶ್ಯಾಫರ್ ಫೆರಾರಿ 300 ಪೆನ್ ಪರಿಚಯಿಸಿದೆ.

ಫೌಂಟೇನ್ ಮತ್ತು ರೋಲರ್ ಬಾಲ್ ಪೆನ್‌ಗಳ ಆಯ್ಕೆ ಈ ಸಂಗ್ರಹದಲ್ಲಿದ್ದು ವಿನ್ಯಾಸ ಮತ್ತು ನೋಟ ಎಲ್ಲರೂ ಮೆಚ್ಚುವಂತಿದೆ ಎಂದು ಕಂಪೆನಿ ಹೇಳಿದೆ. ಉತ್ತಮ ಗ್ರಿಪ್ ಹೊಂದಿದ್ದು, ಬರೆಯಲು ಆರಾಮದಾಯಕವಾಗಿದೆ.

ಬೆಲೆ 3000 ರೂಪಾಯಿಗಳಿಂದ ಆರಂಭ.

ಮಾಹಿತಿಗೆ: 9738007723 www.williampenn.net



## ಟಾಟಾ ಡೊಕೊಮೊ ವೈ-ಫೈ

ಟೆಲಿಕಮ್ಯೂನಿಕೇಷನ್ ಕ್ಷೇತ್ರದಲ್ಲಿ ಸೇವೆ ನೀಡುತ್ತಿರುವ ಟಾಟಾ ಡೊಕೊಮೊ ಇದೀಗ ಗೊ ಫೋಟಾನ್ ಮಾಕ್ಸ್ ವೈ-ಫೈ ರೂಟರ್ ಬಿಡುಗಡೆ ಮಾಡಿದೆ.

ಈ ರೂಟರ್ ಬಳಸಿ 5 ಸಾಧನಗಳಿಗೆ ಅಂತರ್ಜಾಲ ಸಂಪರ್ಕ ನೀಡಬಹುದು. ವೇಗದ ಮತ್ತು ತಡೆರಹಿತ ಸಂಪರ್ಕ ಇದರ ವಿಶೇಷ ಎಂದು ಕಂಪೆನಿ ಹೇಳಿದೆ.




4400 ಎಂಎಹೆಚ್ ಬ್ಯಾಟರಿ ಸಾಮರ್ಥ್ಯ ಹೊಂದಿದೆ, ಪ್ರಯಾಣ ಸಂದರ್ಭದಲ್ಲೂ ಅನುಕೂಲ.

ಬೆಲೆ 2899 ರೂಪಾಯಿ.

ಮಾಹಿತಿಗೆ: 9731388856

## ಆಮ್ರಪಾಲಿ ಟ್ರೈಬ್ ಆಭರಣ

ಸಾಂಪ್ರದಾಯಿಕ ಮತ್ತು ಆಧುನಿಕ ಶೈಲಿಯ ಆಭರಣಗಳಿಗೆ ಪ್ರಸಿದ್ಧವಾದ ಆಮ್ರಪಾಲಿ ಇದೀಗ ಟ್ರೈಬ್ ಸಂಗ್ರಹ ಪರಿಚಯಿಸಿದೆ. ಹಳೆಯ ಕಾಲದ ಆಭರಣಗಳ ವಿನ್ಯಾಸ ಹೋಲುವ ಈ ಸಂಗ್ರಹದಲ್ಲಿ ಚಿನ್ನ ಮತ್ತು ಬೆಳ್ಳಿಯ ವಿವಿಧ ಮಾದರಿಗಳು ಇವೆ. ಹರಳುಕಲ್ಲು ಪೋಣಿಸಿದ ಪೆಂಡೆಂಟ್‌ಗಳು, ನೆಕ್ಲೆಸ್‌ಗಳು, ಕಿವಿಯೋಲೆ ಮತ್ತು ಬಳೆಗಳು ಈ ಸಂಗ್ರಹದ ವಿಶೇಷ. ಇದು ಎಲ್ಲ ವಯೋಮಾನದ ಮಹಿಳೆಯರು ಇಷ್ಟಪಡುವಂತಿದೆ ಎಂದು ಕಂಪೆನಿ ಹೇಳಿದೆ.



ಬೆಲೆ 350 ರೂಪಾಯಿಗಳಿಂದ ಆರಂಭ.

ಮಾಹಿತಿಗೆ: 9980188938

## ಡವ್ ಆಕ್ಸಿಜನ್ ಮಾಯಿಶ್ಚರ್

ಸೌಂದರ್ಯವರ್ಧಕ ಉತ್ಪನ್ನಗಳ ತಯಾರಿಕೆಗೆ ಪ್ರಸಿದ್ಧವಾದ ಡವ್ ಇದೀಗ ಆಕ್ಸಿಜನ್ ಮಾಯಿಶ್ಚರ್ ಮಾರುಕಟ್ಟೆಗೆ ಬಿಡುಗಡೆ ಮಾಡಿದೆ.




ಮಾಯಿಶ್ಚರ್ ಮತ್ತು ಶಾಂಪೂ ಸಹಿತ ಕಂಡೀಷನರ್ ಇದು ಹೊಂದಿದ್ದು, ಹಲವು ವಿಧದಲ್ಲಿ ಉಪಯೋಗಕಾರಿ ಎಂದು ಕಂಪೆನಿ ಹೇಳಿದೆ.

ಕೂದಲನ್ನು ಸದಾ ತೇವವಾಗಿಟ್ಟುಕೊಂಡು ಒಣಗುವಿಕೆಯನ್ನು ತಡೆಗಟ್ಟುತ್ತದೆ. ದಪ್ಪನೆಯ ಮೃದು ಕೂದಲನ್ನು ಹೊಂದಲು ಇದು ಸಹಕಾರಿ.

80 ಎಂಎಲ್ ಬಾಟಲಿ ಬೆಲೆ 83 ರೂಪಾಯಿ.

ಮಾಹಿತಿಗೆ: 9972066555

## ಫಿಲಿಪ್ಸ್ ಏರ್ ಪ್ಯೂರಿಫೈಯರ್

ಎಲೆಕ್ಟ್ರಾನಿಕ್ ಉತ್ಪನ್ನಗಳ ತಯಾರಿಕೆಗೆ ಪ್ರಸಿದ್ಧವಾದ ಫಿಲಿಪ್ಸ್ ಇದೀಗ ಆಧುನಿಕ ಮಾದರಿಯ ಏರ್ ಪ್ಯೂರಿಫೈಯರ್ ಹೊರತಂದಿದೆ.

ಆಕರ್ಷಕ ವಿನ್ಯಾಸದೊಂದಿಗೆ ಕಡಿಮೆ ಸ್ಥಳಾವಕಾಶ ಬಳಸುವ ಇದು, ನಾಲ್ಕು ಹಂತದ ಶುದ್ಧೀಕರಣ ವ್ಯವಸ್ಥೆ ಹೊಂದಿದೆ.

ಸ್ಮಾರ್ಟ್ ಸೆನ್ಸರ್ ಸಹಿತ ಸ್ವಯಂಚಾಲಿತ ನಿಯಂತ್ರಣ ವ್ಯವಸ್ಥೆ ಇದರಲ್ಲಿದ್ದು, 4 ವಿಧದ ಮಾದರಿಗಳಲ್ಲಿ ಲಭ್ಯ. ಶುದ್ಧ ಮತ್ತು ಸುವಾಸನಾಭರಿತ ಗಾಳಿ ಬಯಸುವವರಿಗೆ ಇದು ಉತ್ತಮ ಆಯ್ಕೆ.

ಬೆಲೆ 16,995 ರೂಪಾಯಿಗಳಿಂದ ಆರಂಭ.

